158ನೇ ಮು.ಉ SL.NO:-52 ದಿ:-16-03-26

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ' ಸೋಜಾ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯದ ಕುರಿತು.**

**ವಿಷಯ:** ರಾಜ್ಯದಲ್ಲಿ ಕೇಂದ್ರ ಸರ್ಕಾರದ ನ್ಯಾಷನಲ್ ಕಮೀಷನಲ್ ಫಾರ್ ಅಲೈಡ್ ಹೆಲ್ತ್ ಕೇರ್ ಪ್ರೊಫೆಷನ್ಸ್ ಹೊರಡಿಸಿರುವ ನೂತನ ಸುತ್ತೋಲೆಯು ಪ್ಯಾರಾ ಮೆಡಿಕಲ್ ಕೋರ್ಸ್ ಸೇರಬಯಸುವ ವಿದ್ಯಾರ್ಥಿಗಳು ಸಂಕಷ್ಟಕ್ಕೆ ತುತ್ತಾಗಿದ್ದಾರೆ. ಇವರೆಗೂ ಎಸ್ಸೆಸ್ಸೆಲ್ಸಿ ನಂತರ ವೈದ್ಯಕೀಯ ಕ್ಷೇತ್ರದ ತರಬೇತಿ ಪಡೆಯಲು ಅವಕಾಶವಿತ್ತು. ಆದರೆ ಇನ್ನೂ ಮುಂದೆ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ತೇರ್ಗಡೆಯಾದವರಿಗೆ ಮಾತ್ರ ಪ್ರವೇಶ ಎಂದು ನಿಯಮ ರೂಪಿಸಿರುವುದು ಹೊಸ ಶೈಕ್ಷಣಿಕ ಬಿಕ್ಕಟ್ಟಿಗೆ ನಾಂದಿಯಾಗಿದೆ. ಕೇಂದ್ರ ಆಯೋಗವು ಜ.9ರಂದು ಯುಜಿಸಿಗೆ ಪತ್ರ ಬರೆದು, ದೇಶಾದ್ಯಂತ ಪ್ಯಾರಾ ಮೆಡಿಕಲ್ ಕೋರ್ಸ್‌ಗಳಿಗೆ ಇನ್ನು ಮುಂದೆ ಪ್ರವೇಶ ಪಡೆಯಲು ಪಿಯುಸಿ ವಿಜ್ಞಾನ ಪೂರೈಸಿರುವುದನ್ನು ಕಡ್ಡಾಯ ಮಾಡಲಾಗಿದೆ. ಈ ನೂತನ ನಿಯಮವನ್ನು 2026-27ನೇ ಸಾಲಿನಿಂದಲೇ ಜಾರಿಗೆ ತರಲು ಎಲ್ಲ ರಾಜ್ಯಗಳಿಗೆ ಸೂಚನೆ ನೀಡಿರುವುದು ವಿದ್ಯಾರ್ಥಿಗಳ ಪಾಲಿಗೆ ದುರದುಷ್ಟಕರ ಸಂಗತಿಯಾಗಿದೆ.

ರಾಜ್ಯದಲ್ಲಿ ಪ್ರಸ್ತುತ 32 ಸರ್ಕಾರಿ ಹಾಗೂ 608 ಖಾಸಗಿ ಕಾಲೇಜು ಸೇರಿ 640 ಪ್ಯಾರಾ ಮೆಡಿಕಲ್ ಶಿಕ್ಷಣ ಸಂಸ್ಥೆಗಳಿದ್ದು, ಹೊಸ ನಿಯಮ ಜಾರಿಯಾದರೆ 450 ರಿಂದ 500 ಕಾಲೇಜುಗಳಿಗೆ ಅರ್ಹ ಅಭ್ಯರ್ಥಿಗಳ ಕೊರತೆ ಉಂಟಾಗಲಿದೆ. ಸಾಮಾನ್ಯವಾಗಿ ಗ್ರಾಮೀಣ, ಬಡ ಕುಟುಂಬದ ವಿದ್ಯಾರ್ಥಿಗಳು ಶೀಘ್ರ ಉದ್ಯೋಗ ಪಡೆಯುವ ಹಂಬಲದಿಂದ ಎಸ್ಸೆಸ್ಸೆಲ್ಸಿ ನಂತರ ಈ ಕೋರ್ಸ್ ಆಯ್ಕೆ ಮಾಡಿಕೊಂಡು, ಪ್ರತಿ ವರ್ಷ ರಾಜ್ಯದಲ್ಲಿ 15 ಸಾವಿರ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿದ್ದರು. ಈಗ ಪಿಯುಸಿ ವಿಜ್ಞಾನ ಕಡ್ಡಾಯದಿಂದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತದೆ. ಆದರಿಂದ ಕೇಂದ್ರ ಸರ್ಕಾರದ ಈ ದಿಢೀರ್ ನಿರ್ಧಾರವನ್ನು ಕೈಬಿಡುವಂತೆ ರಾಜ್ಯ ಸರ್ಕಾರ ಕೇಂದ್ರದ ಮೇಲೆ ಒತ್ತಡ ಹೇರಬೇಕಾಗಿರುವ ಸಾರ್ವಜನಿಕ ಮಹತ್ವವುಳ್ಳ ವಿಚಾರವಾಗಿರುವುದರಿಂದ ಸದನದ ಶೂನ್ಯವೇಳೆಯಲ್ಲಿ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಮುಂದೆ ಪ್ರಸ್ತಾಪಿಸ ಬಯಸುತ್ತೇನೆ.

**ಹೇಳಿಕೆ:** National Commission for Allied and Healthcare Professions (NCAHP) ಇವರು ದಿನಾಂಕ:24.04.2025, 15.10.2025, 29.10.2025, 12.11.2025 ಮತ್ತು 26.12.2025 ರಂದು ಹೊರಡಿಸಿದ ಸೂಚನೆಗಳಿಗೆ ಸಂಬಂಧಿಸಿದಂತೆ NCAHPನಿಂದ ಅನುಮೋದಿಸಲ್ಪಟ್ಟ ಪಠ್ಯಕ್ರಮಗಳು, ಪದವಿ ಹೆಸರುಗಳು, ಪ್ರವೇಶ ಅರ್ಹತಾ ಮಾನದಂಡಗಳು ಹಾಗೂ ಇತರ ಶೈಕ್ಷಣಿಕ ನಿಯಮಾವಳಿಗಳನ್ನು ಎಲ್ಲಾ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳು 2026–27ನೇ ಶೈಕ್ಷಣಿಕ ವರ್ಷದಿಂದ ಯಾವುದೇ ವ್ಯತ್ಯಾಸವಿಲ್ಲದೆ ಕಡ್ಡಾಯವಾಗಿ ಅಂಗೀಕರಿಸಿ ಜಾರಿಗೆ ತರಬೇಕು ಎಂದು ನಿರ್ದೇಶನ ನೀಡಲಾಗಿದೆ.ಈ ಸಂಬಂಧ ಎಲ್ಲಾ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳು NCAHP ಹೊರಡಿಸಿರುವ ನಿರ್ದೇಶನಗಳು, ನಿಯಮಾವಳಿಗಳು, ಪಠ್ಯಕ್ರಮಗಳು ಮತ್ತು ಶೈಕ್ಷಣಿಕ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಸಂಪೂರ್ಣ ಅನುಸರಣೆ ಮಾಡಬೇಕು. ಯಾವುದೇ ವ್ಯತ್ಯಾಸ, ಅನುಸರಣೆ ಕೊರತೆ ಅಥವಾ ಅನುಮೋದನೆ ಇಲ್ಲದ ಪದವಿ ಹೆಸರುಗಳು ಅಥವಾ ಪ್ರವೇಶ ಮಾನದಂಡಗಳನ್ನು ಮುಂದುವರಿಸುವುದು ಗಂಭೀರವಾಗಿ ಪರಿಗಣಿಸಲಾಗುತ್ತದೆ ಮತ್ತು ಅನ್ವಯಿಸುವ ಕಾನೂನುಗಳು ಹಾಗೂ ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ.

ಮುಂದುವರೆದು ಪ್ಯಾರಾಮೆಡಿಕಲ್ ಡಿಪ್ಲೋಮಾ ಕೋರ್ಸ್‌ಗಳ ಪ್ರವೇಶಾತಿಗೆ, ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ತೇರ್ಗಡೆ ಆಗಿರಬೇಕು ಎಂಬುದನ್ನು ಕಡ್ಡಾಯ ಮಾಡಲಾಗಿದೆ

ಹಾಗೂ 2026-27ನೇ ಸಾಲಿನಿಂದ ಈ ಕೆಳಕಂಡ 4 ಡಿಪ್ಲೋಮಾ ಕೋರ್ಸ್‌ಗಳನ್ನು ನಡೆಸಲು ಪಠ್ಯಕ್ರಮವನ್ನು NCAHP ಯಿಂದ ಬಿಡುಗಡೆ ಮಾಡಲಾಗಿದೆ.

1. Diploma in Anaesthesia and Operation Theatre Technology (D.AOTT)
2. Diploma in Dialysis Technology (D.DT)
3. Diploma in Radiotherapy Technology (D.RT)
4. Diploma in Health Information Management (D.HIM)

ರಾಜ್ಯದಲ್ಲಿ 645 ಪ್ಯಾರಾ ಮೆಡಿಕಲ್ ಕಾಲೇಜುಗಳಿದ್ದು, ಸುಮಾರು 35000 (35 ಸಾವಿರ) ಸೀಟುಗಳಿದ್ದು ಸದರಿ ವಿದ್ಯಾರ್ಥಿಗಳ ಉತ್ತೀರ್ಣರಾದ ನಂತರ ಗ್ರಾಮೀಣ ಪ್ರದೇಶಗಳ ಆರೋಗ್ಯ ಸೇವೆಗಳಿಗೆ ಮಾನಸಂಪನ್ಮೂಲವನ್ನು ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಮತ್ತು ಕರ್ನಾಟಕ ರಾಜ್ಯ ಅರೆವೈದ್ಯಕೀಯ ಮಂಡಳಿಯಲ್ಲಿ ಉಳಿದ ಕೋರ್ಸ್‌ಗಳಾದ DMLT, DMIT, DHI, DMRT, DOT, DDM, DDH ಮತ್ತು DPTಗಳ ಪ್ರವೇಶಾತಿ ಮತ್ತು ಅರ್ಹತಾ ಮಾನದಂಡಗಳ ಈ ಎಲ್ಲಾ ವಿಷಯದ ಬಗ್ಗೆ ಪೂರ್ಣ ಪ್ರಮಾಣದ ನಿಯಮಾವಳಿಗಳು ಅನುಷ್ಠಾನಕ್ಕೆ ಬರುವವರೆಗೂ ಕಾಲಾವಕಾಶ ಕೇಳಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇವರು ದಿನಾಂಕ:11.02.2026ರಂದು The Chairman, National Commission for Allied and Healthcare Profession, New Delhi ಇವರಿಗೆ ಪತ್ರ ಬರೆದಿರುತ್ತಾರೆ.

ಸದರಿ ವಿಷಯದ ಬಗ್ಗೆ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಇವರು ಸಲ್ಲಿಸಿರುವ ಪತ್ರವನ್ನು NCAHP ಅವರಿಗೆ ತುರ್ತು ಸ್ಪಷ್ಟೀಕರಣ ನೀಡುವಂತೆ ದಿನಾಂಕ 02.03.2026 ರಂದು ಕೋರಲಾಗಿದೆ

ಪರಿಷತ್ತಿನ ಪೀಠಸ್ಥರು, ಕಾರ್ಯದರ್ಶಿಗಳು ಹಾಗೂ ವೈದ್ಯಕೀಯ ಶಿಕ್ಷಣ ನಿರ್ದೇಶಕರು ಖುದ್ದಾಗಿ NCAHP ಪೀಠಸ್ಥರೊಂದಿಗೆ ಚರ್ಚಿಸಲು ದಿನ ನಿಗಧಿಪಡಿಸುವಂತೆ ದಿನಾಂಕ:17.02.2026 ರಂದು ಇಮೇಲ್ ಮುಖಾಂತರ ಕೋರಿರುತ್ತಾರೆ ಹಾಗೂ ಪೀಠಸ್ಥರು NCAHP ಯವರೊಂದಿಗೆ NCAHP ಯಿಂದ ಹೊರಡಿಸಲಾಗಿರುವ ನಿರ್ದೇಶನಗಳ ಕುರಿತಾಗಿ ಚರ್ಚಿಸಲು ಅಭಿಪ್ರಾಯ ವ್ಯಕ್ತ ಪಡಿಸಿರುತ್ತಾರೆ.

ಸಂಖ್ಯೆ: ಎಂಇಡಿ 155 ಎಂಎಸ್‌ಎಫ್ 2026

(ಡಾ: ಶರಣಪ್ರಕಾಶ ಆರ್. ಪಾಟೀಲ)
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.